**ಪಾಠ–4** **ಏಪ್ರಿಲ್ 28–ಮೇ 5**

# ರಕ್ಷಣೆ ಮತ್ತು ಕೊನೆಯ ಕಾಲ

**ಸಬ್ಬತ್ತಿನ ಮಧ್ಯಾಹ್ನ**

**ಈ ವಾರದ ಅಧ್ಯಯನಕ್ಕಾಗಿ :** ಯೋಹಾನ 14:9; ಚೆಫನ್ಯ 3:17; ಯೋಹಾನ 1:1–3; ರೋಮ 8:38,39; ಕೀರ್ತನೆ 91:15,16; ಪ್ರಕಟಣೆ 14:6,7; ಎಫೆಸ 1:4,5.

***ಸ್ಮರಣ ವಾಕ್ಯ :*** **"ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ". (ಯೋಹಾನ 4:10)**

ಕ್ರೈಸ್ತತ್ವ ಮತ್ತು ಇತರೆ ಧರ್ಮಗಳ ನಡುವೆ ಇರುವ ಒಂದು ಮುಖ್ಯವಾದ ವ್ಯತ್ಯಾಸವೆಂದರೆ ಬೇರೆ ಧರ್ಮಗಳು ಅವರ ಸಂಸ್ಥಾಪಕರು ಏನು ಭೋದಿಸಿದ್ದಾರೋ ಅದಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ ಹೊರತು ಆ ಸಂಸ್ಥಾಪಕರು ಅವರಿಗಾಗಿ ಏನು ಮಾಡಿದ್ದಾರೆ ಎಂಬುದನ್ನು ಹೇಳುವುದಿಲ್ಲ. ಅದಕ್ಕಾಗಿಯೇ ಆ ಧರ್ಮಗಳ ಸಂಸ್ಥಾಪಕರು ಅವರಿಗಾಗಿ ಏನು ಮಾಡಿದ್ದಾರೋ ಅದು ಅವರನ್ನು ರಕ್ಷಿಸಲು ಸಾಧ್ಯವಿಲ್ಲ. ಈ ಎಲ್ಲಾ ನಾಯಕರು ಕೂಡ ಅವರ ಹಿಂಬಾಲಕರಿಗೆ ಹೇಳಿದ ಒಂದೇ ಒಂದು ಭೋಧನೆಯೆಂದರೆ ಅವರನ್ನು ಅವರು ಹೇಗೆ ರಕ್ಷಿಸಿ ಕೊಳ್ಳುವುದು.

ಇದಕ್ಕೆ ವಿರುದ್ದವಾಗಿ, ಕ್ರೈಸ್ತತ್ವವು ಯೇಸುವು ಏನು ಭೋದಿಸಿದನೋ ಅದಕ್ಕೆ ಮಹತ್ವ ನೀಡುವುದಲ್ಲದೆ ಆತನು ಏನು ಮಾಡಿದನು ಎಂಬುದರ ಕುರಿತಾಗಿ ಹೆಚ್ಚಿನ ಮಹತ್ವ ನೀಡುತ್ತದೆ. ಆತನು ಮಾಡಿದ ಕಾರ್ಯದಿಂದ ಮಾತ್ರ ನಾವು ರಕ್ಷಣೆ ಹೊಂದಲು ಸಾದ್ಯ. ಕ್ರಿಸ್ತನು ಮಾನವನಾಗಿ ಈ ಲೋಕಕ್ಕೆ ಬಂದಿದ್ದು (ರೋಮ 8:3), ಶಿಲುಬೆಯ ಮೇಲೆ ಆತನ ಮರಣ (ರೋಮ 5:8), ಆತನ ಪುನರುತ್ಥಾನ (1 ಪೇತ್ರನು 1:3) ಮತ್ತು ಪರಲೋಕದಲ್ಲಿ ಆತನ ಸೇವೆ (ಇಬ್ರಿಯರಿಗೆ

7:25) ಈ ಕಾರ್ಯಗಳು ಮಾತ್ರ ನಮ್ಮನ್ನು ರಕ್ಷಿಸುತ್ತವೆ. ಇದು ರಕ್ಷಣೆ ನಮ್ಮಿಂದ ಸಾಧ್ಯವಿಲ್ಲ ಎಂಬುದನ್ನು ತೋರಿಸುತ್ತದೆ. ಮನುಷ್ಯನಲ್ಲಿರುವ ಒಳ್ಳೆಯತನ, ಪರಿಶುದ್ದತೆ ಮತ್ತು ನೀತಿ ಕಾರ್ಯಗಳು ಹಾಗೂ ನ್ಯಾಯ ಕ್ರಿಯೆಗಳು ಎಲ್ಲವನ್ನೂ ಕೂಡ ದೇವರ ಪರಿಶುದ್ದ ದೇವದೂತರ ಮುಂದೆ ಮಾನವನನ್ನು ರಕ್ಷಿಸುವ ಸಾಧನೆಗಳಾಗಿ ತೋರಿಸಿದರೆ ಅಥವಾ ಅರ್ಹತೆಯಾಗಿ ಮುಂದಿಟ್ಟರೆ ಅದರ ಅನುಪಾತವು ದೇಶದ್ರೋಹದ ಹಾಗೆ ನಿರಾಕರಣೆಗೆ ಒಳಗಾಗುತ್ತದೆ. ಎಲೆನ್ ಜಿ ವೈಟ್, ಫೈತ್ ಅಂಡ್ ವರ್ಕ್ಸ್, ಪುಟ 24.

ಕೊನೆಯ ದಿನಗಳ ವಂಚನೆಗಳ ನಡುವೆ ಈ ಅದ್ಭುತವಾದ ಸತ್ಯವೂ ನಮಗೆ ಬಹಳ ಪ್ರಾಮುಖ್ಯವಾಗುತ್ತದೆ.

**ಈ ವಾರದ ಪಾಠವನ್ನು ಏಪ್ರಿಲ್ 28 ರ ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ.**

**ಭಾನುವಾರ**

## ತಂದೆಯ ಪ್ರೀತಿ

ಶಿಲುಬೆಗೆ ಹೋಗುವ ಸ್ವಲ್ಪ ಸಮಯದ ಮುನ್ನ ಯೇಸುವು ತನ್ನ ಶಿಷ್ಯರ ಜೊತೆಯಲ್ಲಿ ಜನರು ಆತನ ಮೂಲಕ ತಂದೆಯ ಬಳಿಗೆ ಬರುವುದು ಹೇಗೆ ಎಂದು ತಿಳಿಸಿದನು. ಆಗ ಫಿಲಿಪ್ಪನು ಹೀಗೆ ಹೇಳಿದನು ಸ್ವಾಮೀ ನಮಗೆ ತಂದೆಯನ್ನು ತೋರಿಸು, ಅದು ನಮಗೆ ಸಾಕು ಎಂದು ಹೇಳಿದನು (ಯೋಹಾನ 14:8).

**ಫಿಲಿಪ್ಪನಿಗೆ ಯೇಸುವು ಯಾವ ರೀತಿಯ ಉತ್ತರವನ್ನು ಕೊಟ್ಟನು? ಯೋಹಾನ 14:9. ಆತನ ಉತ್ತರವು ತಂದೆಯ ಕುರಿತಾಗಿ ಏನು ಹೇಳುತ್ತದೆ? ತಂದೆಯ ಕುರಿತಾಗಿ ಇದ್ದ ಊಹಾಪೋಹಗಳಿಗೆ ಅದು ಯಾವ ರೀತಿಯ ತೆರೆಯನ್ನು ಎಳೆಯುತ್ತದೆ?**

ಹಳೆ ಒಡಂಬಡಿಕೆಯ ದೇವರು ಹೊಸ ಒಡಂಬಡಿಕೆಯ ದೇವರಿಗಿಂತ ಹೆಚ್ಚಿನ ನ್ಯಾಯವನ್ನು ಪಾಲಿಸುವ ದೇವರಾಗಿದ್ದನು ಎಂದು ಕೆಲವರು ವಾದಿಸುತ್ತಾರೆ. ಹೊಸ ಒಡಂಬಡಿಕೆಯ ದೇವರು ಕರುಣೆಯ ಮತ್ತು ಕೃಪೆಯ ಹಾಗೂ ಕ್ಷಮಾಪಣೆಯ ದೇವರಾಗಿದ್ದಾನೆ.ಈ ಎರಡರ ನಡುವಇರುವ ವ್ಯತ್ಯಾಸವು ಅನುಮೋದನೆಗೆ ಯೋಗ್ಯವಾದ ವಾದವಲ್ಲ. ಹೊಸ ಮತ್ತು ಹಳೆಯ ಒಡಂಬಡಿಕೆಯಲ್ಲಿರುವ ದೇವರು ಒಬ್ಬನೇ ಆಗಿದ್ದಾನೆ, ಆತನ ಸ್ವಭಾವವು ಬದಲಾಗುವುದಿಲ್ಲ.

ತಂದೆಯಾದ ದೇವರ ಕುರಿತಾಗಿ ಸರಿಯಾದ ಚಿತ್ರಣವನ್ನು ನೀಡಲು ಯೇಸುವು ಈ ಲೋಕಕ್ಕೆ ಬಂದನು. ಶತಮಾನಗಳ ತನಕ, ಆತನ ಕುರಿತಾಗಿ ಅನೇಕ ಆಲೋಚನೆಗಳು ಮತ್ತು ಆತನ ಸ್ವಭಾವದ ಕುರಿತಾಗಿ ಅನೇಕ ವಿಚಾರಗಳು ಹರಿದಾಡುತ್ತಿದ್ದವು, ಈ ಉಹಾಪೋಹಗಳು ಕೇವಲ ಅನ್ಯಜನರಲ್ಲಿ ಮಾತ್ರವಲ್ಲದೆ ದೇವರ ಮಕ್ಕಳ ನಡುವೆಯೂ ಕೂಡ ಪ್ರಚಲಿತವಾಗಿದ್ದವು. ಲೋಕವು ದೇವರ ಕುರಿತಾಗಿ ತಪ್ಪು ಗ್ರಹಿಕೆಯಲ್ಲಿ ಮುಳುಗಿತ್ತು. ಈ ಕಾರ್ಗತ್ತಲು ತೊಲಗಬೇಕಾಗಿತ್ತು, ಆಗ ಸರಿಯಾದ ಬೆಳಕು ದೇವರನ್ನು ತೋರಿಸಬೇಕಾಗಿತ್ತು,ಸೈತಾನನ ಮೋಸದ ಕ್ರಿಯೆಗಳು ಮುರಿಯಲ್ಪಡಬೇಕಾಗಿತ್ತು. **ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಎಜಸ್, ಪುಟ 22**. ಈ ಕಾರಣಗಳಿಗಾಗಿ ಯೇಸುವು ಈ ಲೋಕಕ್ಕೆ ಬಂದನು.

ದೇವರು ಬದಲಾಗುವುದಿಲ್ಲ. ಹಳೆಯ ಒಡಂಬಡಿಕೆಯ ಎಲ್ಲಾ ಘಟನೆಗಳ ಹಿನ್ನಲೆಯನ್ನು ಗಮನಿಸಿದಾಗ ದೇವರು ಹೊಸ ಒಡಂಬಡಿಕೆಯಲ್ಲಿ ಯಾವ ಕೃಪೆಯನ್ನು ತೋರಿಸಿದ್ದಾನೋ ಅದೇ ರೀತಿಯಲ್ಲಿ ಹಳೆಯ ಒಡಂಬಡಿಕೆಯಲ್ಲಿಯೂ ಕೃಪೆಯನ್ನು ತೋರಿಸಿದ್ದಾನೆ. ಸತ್ಯವೇದವು ಹೇಳುವ ಪ್ರಕಾರ ದೇವರು ಪ್ರೀತಿಸ್ವರೂಪನು (1 ಯೋಹಾನ 4:8), ಮತ್ತು ದೇವರು ಬದಲಾಗುವುದಿಲ್ಲ ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತು ಇದ್ದಾನೆ, ನಿರಂತರವೂ ಹಾಗೆಯೇ ಇರುವನು. (ಇಬ್ರಿಯರಿಗೆ 13:8).

ಹಳೆಯ ಒಡಂಬಡಿಕೆಯ ದೇವರು ತಾನೇ ಶಿಲುಬೆಯಲ್ಲಿ ಪ್ರಾಣ ತ್ಯಾಗ ಮಾಡಿದನು ಎಂಬುದನ್ನು ಗಮನಿಸಬೇಕು.

ಈ ದೇವರು ಕನಿಕರವೂ, ದಯೆಯೂ ಉಳ್ಳ ದೇವರು ಧೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು. (ವಿಮೋಚನೆಕಾಂಡ 34:6,7), ದೇವರ ಪ್ರೀತಿಯು ಅಳಿದುಹೋಗುವುದಿಲ್ಲ (ಕೀರ್ತನೆ 143:8) ಮತ್ತು ಆತನ ಹಿಂಬಾಲಕರಲ್ಲಿ ಆತನು ಆನಂದಿಸುವನು (ಕೀರ್ತನೆ 147:11). ದೇವರು ತನ್ನ ಜನರನ್ನು ಅಭಿವೃದ್ಧಿಪಡಿಸುತ್ತಾನೆ ಮತ್ತು ಅವರಿಗೆ ನಿರೀಕ್ಷೆಯನ್ನು ನೀಡುತ್ತಾನೆ. (ಯೆರೆಮಿಯ 29:11). ಆತನ ಪ್ರೀತಿಯಲ್ಲಿ ಆತನು ಗದರಿಸುವುದಿಲ್ಲ ಬದಲಿಗೆ ಆತನ ಮಕ್ಕಳ ಜೊತೆಯಲ್ಲಿ ಸಂತೋಷಿಸುತ್ತಾನೆ (ಚೆಫನ್ಯ 3:17). ಇದುವೇ ತಂದೆಯಾದ ದೇವರ ನಿಜಸ್ವರೂಪವಾಗಿದೆ.

**ಯೇಸುವು ತಂದೆಯಾದ ದೇವರನ್ನು ಪ್ರತಿನಿಧಿಸುತ್ತಾನೆ ಎಂಬುದರ ಕುರಿತಾಗಿ ಆಲೋಚಿಸಿರಿ. ದೇವರ ಕುರಿತಾಗಿ ಭಯಭ್ರಾಂತಿ ಯನ್ನು ಹೊಂದಿರುವವರಿಗೆ ಇದು ಯಾವ ನಿರೀಕ್ಷೆಯನ್ನು ಮತ್ತು ಆಶ್ವಾಸನೆಯನ್ನು ನೀಡುತ್ತದೆ?**

**ಸೋಮವಾರ**

## ಕ್ರಿಸ್ತನ ಪ್ರೀತಿ

ಪಾಪವು ಮಾನವ ಕುಲವನ್ನು ದೇವರಿಂದ ದೂರ ಮಾಡಿತು: ಅವರಿಬ್ಬರ ನಡುವೆ ಒಂದು ದೊಡ್ಡ ಕಂದಕ ಉಂಟಾಯಿತು, ಮತ್ತು ಈ ಕಂದಕವನ್ನು ಮುಚ್ಚುವ ತನಕ ಮಾನವತೆಯು ನಿತ್ಯ ನಾಶನದಲ್ಲಿ ಮುಳುಗಿತ್ತು. ಈ ಕಂದಕವು ಆಳವಾಗಿ ಮತ್ತು ಭಯಂಕರವಾಗಿತ್ತು. ಪಾಪದ ಸಮಸ್ಯೆಯನ್ನು ಪರಿಹರಿಸಲು ಒಂದು ವಿಶೇಷವಾದ ಯೋಜನೆಯು ಬೇಕಾಯಿತು ಮತ್ತು ಪಾಪದ ಮನುಷ್ಯನನ್ನು ಪರಿಶುದ್ದ ದೇವರನ್ನು ಒಂದುಗೂಡಿಸುವುದು ಒಂದು ದೊಡ್ಡ ಸಾಧನೆಯಾಯಿತು. ಇದು ನಿತ್ಯನಾದ ದೇವರನ್ನು ಬಯಸಿತು, ದೈವತ್ವವನ್ನು ಧರಿಸಿದ್ದ ದೇವರೇ ಬೇಕಾಯಿತು, ಆತನು ಮಾನವನ ರೂಪವನ್ನು ತಾಳಬೇಕಾಯಿತು ನಮ್ಮ

ಪಾಪಗಳಿಗಾಗಿ ಆತನು ತನ್ನನ್ನು ತಾನು ಬಲಿಯಾಗಿ ಅರ್ಪಿಸಬೇಕಾಯಿತು.

**ಯೋಹಾನ 1:1–3,14 ನ್ನು ಮತ್ತು ಫಿಲಿಪ್ಪಿ 2:5–8 ನ್ನು ಓದಿರಿ. ಯೇಸುವು ಯಾರು ಎಂದು ಈ ವಚನಗಳು ಹೇಳುತ್ತವೆ.**

________________________________________

________________________________________

ಕ್ರಿಸ್ತನು ನಿತ್ಯನಾದ ದೇವರಾಗಿದ್ದನು ಆತನ ಅಸ್ತಿತ್ವಕ್ಕೆ ಯಾರ ಮತ್ತು ಯಾವುದರ ಮೇಲೂ ಆಧಾರವಾಗಿರಬೇಕಾಗಿರಲಿಲ್ಲ. ಆತನು ದೇವರಾಗಿದ್ದನು ಆತನು ದೇವರ ಸ್ವರೂಪವಾಗಿರಲಿಲ್ಲ ಬದಲಿಗೆ ಆತನೇ ದೇವರಾಗಿದ್ದನು. ಆತನ ಸ್ವಭಾವವು ದೈವಿಕವಾಗಿತ್ತು ಮತ್ತು ನಿತ್ಯತ್ವವಾಗಿತ್ತು. ಈ ದೈವತ್ವವನ್ನು ಹಾಗೆಯೆ ಇರಿಸಿಕೊಂಡು ಮಾನವನ ರೂಪವನ್ನು ಧರಿಸಿಕೊಂಡು ಮಾನವ ದೇಹದಲ್ಲಿ ಆಜ್ಞೆಯನ್ನು ಮೀರಿ ಪಾಪಕ್ಕೆ ಒಳಗಾಗಿದ್ದ ನಮ್ಮೆಲ್ಲರನ್ನೂ ಕೂಡ ರಕ್ಷಿಸಲು ಮಾನವನಾಗಿ ಆಜ್ಞೆಗೆ ಪರಿಪೂರ್ಣವಾದ ವಿಧೇಯತೆಯನ್ನು ತೋರಿಸಿದನು. (ರೋಮ 3:23).

ಕ್ರಿಸ್ತನು ಮಾನವನಾದನು, ಆತನಿಗೆ ಮಾನವರಿಗಿಂತ ಹೆಚ್ಚಿನ ಸೌಲಭ್ಯಗಳು ಇರಲಿಲ್ಲ. ಆತನು ದೇವರ ಆಜ್ಞೆಯನ್ನು ಕೈಕೊಂಡು ನಡೆದನು, ಈ ವಿಧೇಯತೆಯನ್ನು ಆತನು ದೈವತ್ವದ ಮೂಲಕ ತೋರಿಸಲಿಲ್ಲ ಬದಲಿಗೆ ತನ್ನ ತಂದೆಯ ಮೇಲೆ ಸಂಪೂರ್ಣವಾಗಿ ಅವಲಂಬಿತನಾಗಿ ಯಾವುದೇ ಮಾನವನಿಗೆ ಸಿಗುವ ದೈವಿಕ ಸಹಾಯದ ಮೂಲಕ ಇದನ್ನು ನೆರವೇರಿಸಿದನು.

ಯೇಸುವು ಸಂಪೂರ್ಣವಾಗಿ ದೇವರಾಗಿದ್ದನು ಮತ್ತು ಸಂಪೂರ್ಣವಾಗಿ ಮನುಷ್ಯನಾಗಿದ್ದನು. ಇದರ ಅರ್ಥವೆಂದರೆ ಆತನ ಮಾತಿನ ಶಕ್ತಿಯಿಂದ ಎಲ್ಲಾ ವಸ್ತುಗಳನ್ನು ಹಿಡಿದುಕೊಂಡಿದ್ದನು (ಇಬ್ರಿಯರಿಗೆ 1:3) ಇದೇ ದೇವರು ಗೊದಲಿಯಲ್ಲಿ ಮಲಗಿದ್ದ ಮಗು ವಾಗಿದ್ದನು (ಲೂಕ 2:16). ಇದರ ಅರ್ಥವೆಂದರೆ ಆತನು ಎಲ್ಲಕ್ಕೂ ಮೊದಲು ಇದ್ದವನು ಆತನು ಸಮಸ್ತಕ್ಕೂ ಅಧಾರಭೂತನು (ಕೊಲೆಸ್ಸಿ 1:17) ಈತನು ಮಾನವ ಮಗುವಾದ ಅದೇ ಮನುಷ್ಯ ನಾಗಿದ್ದನು.

ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾದನು (ಲೂಕ 2:52).ಇದರ ಅರ್ಥವೆಂದರೆ ಸೃಷ್ಟಿಸಲ್ಪಟ್ಟ ಯಾವುದು ಕೂಡ ಆತನಿಲ್ಲದೆ ಸೃಷ್ಟಿಸಲ್ಪಡಲಿಲ್ಲ. (ಯೋಹಾನ 1:3) ಇದೆ ದೇವರನ್ನು ಶಿಲುಬೆಯ ಮರದ ಮೇಲೆ ಕೊಲೆ ಮಾಡಲಾಯಿತು (ಅ ಪೋ ಕೃ 5:30).

ಇವೆಲ್ಲವೂ ಕೂಡ ಕ್ರಿಸ್ತನು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ತೋರಿಸಿದರೆ ಈ ಕ್ರಿಸ್ತನ ಪ್ರೀತಿಯು ನಮ್ಮ ಮೇಲೆ ತಂದೆಯಾದ ದೇವರ ಪ್ರೀತಿಯನ್ನು ತೋರಿಸುತ್ತದೆ, ಈ ಕಾರಣಗಳಿಂದ ನಾವು ದೇವರಲ್ಲಿ ಹೆಚ್ಚಿನ ಆನಂದವನ್ನು ಹೊಂದಬಹುದು!

**ರೋಮ 8:38,39. ಪೌಲನು ಇಲ್ಲಿ ಹೇಳುವ ವಿಷಯಗಳನ್ನು ನಂಬಲು ಇಂದು ನಾವು ಓದಿದ ವಚನಗಳು ಯಾವ ರೀತಿಯ ಬಲವಾದ ಕಾರಣಗಳನ್ನು ನೀಡುತ್ತವೆ?**

**ಮಂಗಳವಾರ**

## ಪರಿಶುದ್ಧಾತ್ಮನ ಪ್ರೀತಿ

ತಂದೆಯಾದ ದೇವರ ರೀತಿಯಲ್ಲಿಯೇ ಪರುಶುದ್ಧಾತ್ಮನನ್ನು ಸಹ ಜನರು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಕೆಲವು ತತ್ವಜ್ಞಾನಿಗಳು ಪರಿಶುದ್ಧಾತ್ಮನನ್ನು ತಂದೆಯ ಮತ್ತು ಮಗನ ನಡುವೆ ಇರುವ ಪ್ರೀತಿ ಎಂದು ಅರ್ಥಮಾಡಿಕೊಳ್ಳುತ್ತಾರೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಪರಿಶುದ್ಧಾತ್ಮ ಎನ್ನುವುದು ತಂದೆಯ ಮತ್ತು ಮಗನ ನಡುವೆ ಇರುವ ಕೇವಲ ಭಾವನೆಯಾಗಿದೆ.ಇದರ ಅರ್ಥವೇನೆಂದರೆ ಪರಿಶುದ್ಧಾತ್ಮನನ್ನು ಕೇವಲ ಒಂದು ಸಂಬಂಧವಾಗಿ ನೋಡಲಾಗಿದೆ ಹೊರೆತು ಒಬ್ಬ ವ್ಯಕ್ತಿಯಾಗಿ ಪರಿಗಣಿಸುತ್ತಿಲ್ಲ.

ಆದರೆ ಸತ್ಯವೇದವು ಆತನನ್ನು ಒಬ್ಬ ವ್ಯಕ್ತಿಯಾಗಿ ತೋರಿಸುತ್ತದೆ. ಕ್ರೈಸ್ತರು ತಂದೆ ಮತ್ತು ಮಗನ ಹೆಸರಿನ ಜೊತೆಗೆ ಆತನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುತ್ತಾರೆ (ಮತ್ತಾಯ 28:19). ಪರಿಶುದ್ಧಾತ್ಮನು ಕ್ರಿಸ್ತನನ್ನು ಮಹಿಮೆ ಪಡಿಸುತ್ತಾನೆ (ಯೋಹಾನ 16:14). ಪರಿಶುದ್ಧಾತ್ಮನು ಜನರನ್ನು ಒಪ್ಪಿಸುತ್ತಾನೆ

(ಯೋಹಾನ 16:8). ಆತನು ದುಃಖ ಪಡುತ್ತಾನೆ (ಎಫೆಸ 4:30). ಆತನು ಸಮಾಧಾನಕರ್ತನಾಗಿದ್ದಾನೆ (ಯೋಹಾನ 14:16) ಸಹಾಯಕನು, ಸಲಹೆಗಾರನು, ಆತನು ಭೋಧಿಸುತ್ತಾನೆ (ಲೂಕ 12:12), ನಮ್ಮ ಪರವಾಗಿ ಬೇಡಿಕೊಳ್ಳುತ್ತಾನೆ (ರೋಮ 8:26) ಪರಿಶುದ್ದ ಪಡಿಸುತ್ತಾನೆ (1 ಪೇತ್ರನು 1:2), ಯೇಸುವು ಹೇಳುವ ಹಾಗೆ ಪರಿಶುದ್ಧಾತ್ಮನು ಜನರನ್ನು ಸರ್ವ ಸತ್ಯದೊಳಗೆ ನಡೆಸುತ್ತಾನೆ (ಯೋಹಾನ 16:13).

ಸಂಕ್ಷಿಪ್ತವಾಗಿ ಹೇಳುವುದಾದರೆ, ತಂದೆ ಮತ್ತು ಮಗನು ಹೇಗೆ ದೇವರಾಗಿದ್ದಾರೋ ಹಾಗೆಯೇ ಪರಿಶುದ್ಧಾತ್ಮನು ಕೂಡ ದೇವರಾಗಿದ್ದಾನೆ, ಒಟ್ಟಿಗೆ ಅವರೆಲ್ಲರೂ ಕೂಡ ಒಂದಾಗಿದ್ದಾರೆ.

**ಪರಿಶುದ್ಧಾತ್ಮನು ಬಹಿರಂಗ ಪಡಿಸುವ ಪ್ರತಿಯೊಂದು ಕೂಡ ದೈವಿಕ ಪ್ರೀತಿಯಾಗಿದೆ. ಆತನು ಮಾಡುವ ಇತರೆ ಕಾರ್ಯಗಳು ಯಾವುವು? ಲೂಕ 12:12, ಯೋಹಾನ 16:8–13, ಅ ಪೋ ಕೃ 13:2.**

ಪರಿಶುದ್ಧಾತ್ಮನು ದೇವರಾಗಿದ್ದಾನೆ ಎಂಬುದಕ್ಕೆ ದೊಡ್ಡ ಸಾಕ್ಷಿಯೆಂದರೆ ಯೇಸು ಕ್ರಿಸ್ತನ ಮಾನವ ಅವತಾರ. ಯೇಸುವು ಪರಿಶುದ್ದಾತ್ಮನಿಂದ ಹುಟ್ಟಿದನು (ಮತ್ತಾಯ 1:20), ದೇವರು ಮಾತ್ರ ಈ ರೀತಿಯಾಗಿ ಸೃಷ್ಟಿ ಮಾಡಲು ಸಾಧ್ಯ.

ಪರಿಶುದ್ಧಾತ್ಮನು ಕ್ರಿಸ್ತನ ಜೀವನದಲ್ಲಿ ಎರಡು ವೈರುದ್ಯದ ಅದ್ಭುತಗಳನ್ನು ಮಾಡಿದನು. ಮೊದಲನೇಯದು, ಆತನು ಸರ್ವಶಕ್ತನಾದ ಕ್ರಿಸ್ತನನ್ನು ಮರಿಯಳ ಹೊಟ್ಟೆಯೊಳಗೆ ತಂದನು. ಕ್ರಿಸ್ತನು ಮಾನವ ದೇಹದಲ್ಲಿ ಪರಲೋಕಕ್ಕೆ ಆರೋಹಣನಾದನು. ಎರಡನೇಯದಾಗಿ, ಪರಿಶುದ್ಧಾತ್ಮನು ಈ ಮಾನವತೆಯನ್ನು ಅನೇಕ ಅದ್ಭುತಗಳ ಮೂಲಕ ಪ್ರಸಿದ್ದಿ ಪಡಿಸಿ ಇಡೀ ಕ್ರೈಸ್ತ ಲೋಕಕ್ಕೆ ಮತ್ತು ಪ್ರಪಂಚಕ್ಕೆ ಪರಿಚಯಿಸಿದನು.

ಈ ರೀತಿಯಲ್ಲಿ ಪರಿಶುದ್ದಾತ್ಮ ದೇವರು ತಂದೆ ಮತ್ತು ಮಗನ ಜೊತೆಯಲ್ಲಿ ನಮ್ಮ ಪರವಾಗಿ ಕೆಲಸ ಮಾಡುತ್ತಿದ್ದಾನೆ. "ತ್ರೈಯೇಕ ದೇವರು ಮಾನವನ ಸ್ಥಿತಿಯನ್ನು ಕಂಡು ಮರುಗಿದರು, ಮತ್ತು ತಂದೆ, ಮಗ ಮತ್ತು ಪರಿಶುದ್ಧಾತ್ಮನು ಒಟ್ಟಿಗೆ ಸೇರಿಕೊಂಡು ವಿಮೋಚನೆಯ ಯೋಜನೆಯನ್ನು ರೂಪಿಸಿದರು" **ಎಲೆನ್ ಜಿ ವೈಟ್, ಆರೋಗ್ಯದ ಮೇಲೆ ಸಲಹೆಗಳು, ಪುಟ 222**.

ತಂದೆ, ಮಗ, ಮತ್ತು ಪರಿಶುದ್ಧಾತ್ಮನು ಎಲ್ಲರೂ ನಮ್ಮನ್ನು ಸಮವಾಗಿ ಪ್ರೀತಿಸುತ್ತಾರೆ ಮತ್ತು ಅವರೆಲ್ಲರೂ ನಮ್ಮನ್ನು ತಂದೆಯ ನಿತ್ಯ ರಾಜ್ಯಕ್ಕೆ ಸೇರಿಸಲು ಕೆಲಸ ಮಾಡುತ್ತಿದ್ದಾರೆ. ನಾವು ಇಂತಹ ಶ್ರೇಷ್ಠ ರಕ್ಷಣೆಯನ್ನು ಹೇಗೆ ತಪ್ಪಿಸಿಕೊಳ್ಳಲು ಸಾಧ್ಯ?

ನಮ್ಮ ಒಳಿತಿಗಾಗಿ ತಂದೆ, ಮಗ, ಮತ್ತು ಪರಿಶುದ್ಧಾತ್ಮನು ಎಲ್ಲರೂ ಕೂಡ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ ಎಂಬುದು ನಮಗೆ ಯಾವ ರೀತಿಯ ಸಮಾಧಾನವನ್ನು ನೀಡುತ್ತದೆ?

**ಬುಧವಾರ**

## ರಕ್ಷಣೆಯ ಭರವಸೆ

ಕೆಲವು ಸೇವೆಂತ್ ಡೇ ಅಡ್ವೆಂಟಿಸ್ಟ್ ರು ತಾವು ರಕ್ಷಿಸಲ್ಪಡುತ್ತೆವೋ ಎಂಬುದಾಗಿ ಅಚ್ಚರಿ ಪಡುತ್ತಾರೆ. ನಿತ್ಯ ಜೀವದ ಕುರಿತಾಗಿ ಮತ್ತು ತಮ್ಮ ಭವಿಷ್ಯದ ಕುರಿತಾಗಿ ಅವರಲ್ಲಿ ಭರವಸೆಯಿರುವುದಿಲ್ಲ. ಅವರು ಒಳ್ಳೆಯವರಾಗಿರಲು ಬಹಳ ಕಷ್ಟ ಪಡುತ್ತಾರೆ ಆದರೆ ಅದರಲ್ಲಿ ಯಾವಾಗಲೂ ವಿಫಲರಾಗುತ್ತಾರೆ. ಅವರ ಜೀವನದ ಪ್ರಯಾಣದಲ್ಲಿ ಅವರಲ್ಲಿರುವ ಸಂಪನ್ಮೂಲಗಳನ್ನು ನೋಡಿಕೊಂಡು ನಿರಾಶೆ ಹೊಂದುವರು.

ಯೇಸು ಕ್ರಿಸ್ತನ ಸ್ವಭಾವ ಮತ್ತು ನಮ್ಮ ಸ್ವಭಾವದ ನಡುವಿನ ಅಂತರವನ್ನು ನಾವು ನೋಡಿದಾಗ ಅದು ಬಹಳ ದೊಡ್ಡದಾಗಿ ಕಾಣುತ್ತದೆ. ಬಾಗಿಲು ದೊಡ್ಡದಾಗಿದೆ, ಮತ್ತು ದಾರಿಯು ಇಕ್ಕಟ್ಟಾಗಿದೆ, ಅದು ನಿತ್ಯ ಜೀವನಕ್ಕೆ ನಡೆಸುತ್ತದೆ

ಆದರೆ ಅದರಲ್ಲಿ ಹೋಗುವವರು ಬಹಳ ಕಡಿಮೆ ಜನ (ಮತ್ತಾಯ 7:14), ನಮ್ಮಲ್ಲಿ ಯಾರು ರಕ್ಷಿಸಲ್ಪಡುವವರು ಎಂದು ನಮ್ಮಲ್ಲಿ ಎಷ್ಟು ಜನ ಕೂತುಹಲದಿಂದ ನೋಡಿಲ್ಲ.?

ಕೊನೆಯ ಕಾಲಕ್ಕೆ ಸಿದ್ದರಾಗಬೇಕಾದರೆ ಅವರಿಗೆ ಇಂದು ರಕ್ಷಣೆಯ ಭರವಸೆ ಬೇಕಾಗಿದೆ. ಭವಿಷ್ಯವನ್ನು ಧೈರ್ಯದಿಂದ ಎದುರಿಸಬೇಕಾದರೆ ಇಂದು ರಕ್ಷಣೆಯ ಭರವಸೆಯಲ್ಲಿ ಜೀವಿಸಬೇಕು. ನಾವು ನೋಡಿದ ಹಾಗೆ ನಮ್ಮನ್ನು ರಕ್ಷಿಸಲು ಸಜೀವವಾದ ತ್ರೈಯೇಕ ದೇವರು ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ನಾವು ರಕ್ಷಣೆಯ ಭರವಸೆಯಲ್ಲಿ ಇರಬೇಕು ಮತ್ತು ಜೀವಿಸಬೇಕು.

**ಈ ವಚನಗಳನ್ನು ಓದಿರಿ. ರಕ್ಷಣೆಯ ವಿಷಯದಲ್ಲಿ ಮತ್ತು ಅದಕ್ಕಾಗಿ ದೇವರು ನಮಗಾಗಿ ಏನು ಮಾಡಿದ್ದಾನೆ ಮತ್ತು ಏನು ಮಾಡುತ್ತಾನೆ ಎಂಬ ಭರವಸೆಯನ್ನು ಈ ವಚನಗಳು ನಮಗೆ ನೀಡುತ್ತವೆ?**

**ಕೀರ್ತನೆ 91:15, 16** ________________________________

**ಯೋವೇಲ 2:31,32** ________________________________

**ಯೋಹಾನ 10:28** ________________________________

**ರೋಮ 10:9–13** ________________________________

**1 ಯೋಹಾನ 5:11–13** ________________________________

ನಾವು ಪರಿಶುದ್ದರಾಗಿರಬೇಕು ಎಂದು ದೇವರು ನಮ್ಮನ್ನು ಕರೆದಿದ್ದಾನೆ ಮತ್ತು ಪರಿಶುದ್ದರಾಗಿರಲು ದೇವರು ಆಜ್ಞಾಪಿಸಿದ್ದಾನೆ ಆದರೆ ಈ ಪರಿಶುದ್ದ ಜೀವನವು ನಮ್ಮ ಕ್ರಿಯೆಗಳಿಂದ ಬಂದಿದ್ದಲ್ಲ ಇದು ಕ್ರಿಸ್ತನ ಮೂಲಕ ದೇವರು ನಮಗೆ ನೀಡಿರುವ ಬಹುಮಾನ. ನಾವು ಮರಣದ ವರೆಗೂ ನಂಬಿಗಸ್ತರಾಗಿರಬೇಕೆಂದು ಹೇಳಿದರೂ ಕೂಡ ನಮ್ಮ ರಕ್ಷಣೆಯ ಬಹುಮಾನದ ಮೇಲೆ ನಾವು ಯಾವಾಗಲೂ ಅಧಾರವಾಗಿರಬೇಕು. ಕೊನೆಯ ಕಾಲದಲ್ಲಿ

ದೇವರ ಮಕ್ಕಳು ನಂಬಿಗಸ್ತರು ಮತ್ತು ವಿಧೆಯರಾಗಿರುವರು, ಯೇಸುವು ನಮಗಾಗಿ ಸಾಧಿಸಿರುವ ರಕ್ಷಣೆಯಲ್ಲಿ ಈ ವಿಧೇಯತೆ ಮತ್ತು ನಂಬಿಕೆಯು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತದೆ.

**ಗುರುವಾರ**

## ನಿತ್ಯ ಸುವಾರ್ತೆ

**ಪ್ರಕಟಣೆ 14:6,7 ನ್ನು  ಓದಿರಿ. ನಿತ್ಯ ಸುವಾರ್ತೆ ಎಂದರೆ ಏನು?**

---

ಸುವಾರ್ತೆಯನ್ನು ಇಲ್ಲಿ ನಿತ್ಯ ಸುವಾರ್ತೆ ಎಂಬುದಾಗಿ ಹೇಳಲಾಗಿದೆ. ದೇವರು ಬದಲಾಗುವುದಿಲ್ಲ ಎಂಬುದಕ್ಕೆ ಇದು ಸ್ಪಷ್ಟವಾದ ಉದಾಹರಣೆ. ಬದಲಾವಣೆಯಾಗದ ದೇವರು ಆತನ ಸುವಾರ್ತೆಯು ಕೂಡ ಬದಲಾಗುವುದಿಲ್ಲ. ಈ ನಿತ್ಯ ಸುವಾರ್ತೆಯು ಅದನ್ನು ಅಂಗಿಕರಿಸುವ ಎಲ್ಲರಿಗೂ ಭರವಸೆಯನ್ನು ನೀಡುತ್ತದೆ. ಸುವಾರ್ತೆಯು ದೇವರ ಬದಲಾಗದ ಪ್ರೀತಿಯನ್ನು ತೋರಿಸುತ್ತದೆ, ಮತ್ತು ಈ ಸಂದೇಶವು ಇಡೀ ಲೋಕಕ್ಕೆ ಸಾರಬೇಕಾಗಿದೆ. ಪ್ರತಿಯೊಬ್ಬರಿಗೂ ಇದನ್ನು ಕೇಳುವ ಅವಕಾಶವನ್ನು ನೀಡಬೇಕಾಗಿದೆ. ಇದನ್ನು ಸಾರುವುದಕ್ಕಾಗಿಯೇ ದೇವರು ತನ್ನ ಜನರನ್ನು ಕರೆದಿದ್ದಾನೆ.

**"ನಾವು ಪ್ರೀತಿಯಲ್ಲಿದ್ದು ಆತನ ಸನ್ನಿಧಿಯಲ್ಲಿ ಪರಿಶುದ್ದರೂ ನಿರ್ದೋಷಿಗಳೂ ಆಗಿರಬೇಕೆಂದು ಆತನು ಜಗತ್ತಿಗೆ ಅಸ್ತಿವಾರ ಹಾಕುವುದಕ್ಕಿಂತ ಮುಂಚೆ ನಮ್ಮನ್ನು (ಕ್ರಿಸ್ತನಲ್ಲಿ) ಆರಿಸಿಕೊಂಡನು. ಆತನು ತನ್ನ ಚಿತ್ತದ ದಯಾಪೂರ್ವಕವಾದ ಆನಂದಕ್ಕನುಸಾರವಾಗಿ ಯೇಸು ಕ್ರಿಸ್ತನ ಮೂಲಕ ನಮ್ಮನ್ನು ತನಗೋಸ್ಕರ ದತ್ತು ಪುತ್ರ ಸ್ವೀಕಾರ ಮಾಡುವಂತೆ ಮೊದಲೇ ಸಂಕಲ್ಪಸಿದ್ದಾನೆ" (ಎಫೆಸ 1:4,5) ಈ ವಚನಗಳ ಪ್ರಕಾರ ನಿತ್ಯ ಸುವಾರ್ತೆ ಎಂದರೆ ಏನು?**

---

ಲೋಕದ ಅಸ್ಥಿವಾರ ಹಾಕುವ ಮುನ್ನ ಕ್ರಿಸ್ತನಲ್ಲಿ ನಮ್ಮನ್ನು ಆಯ್ಕೆ ಮಾಡಿದ್ದಾನೆ. ನಿತ್ಯ ಸುವಾರ್ತೆಯ ಕುರಿತಾಗಿ ಮಾತನಾಡಿರಿ. ಸೃಷ್ಟಿಯ ಮೊದಲೇ ನಾವು ಆತನಲ್ಲಿ ರಕ್ಷಣೆಯನ್ನು ಹೊಂದಬೇಕು ಎನ್ನುವುದು ದೇವರ ಉದ್ದೇಶವಾಗಿದೆ.

ಇಲ್ಲಿ ಕಾಣುವ ಕೆಲವು ವಚನಗಳನ್ನು ನೋಡಿರಿ: ಆಯ್ಕೆ, ನಿಶ್ಚಯಿಸಲ್ಪಟ್ಟಿದ್ದೇವೆ, ಒಳ್ಳೆಯ ಉದ್ದೇಶಕ್ಕಾಗಿ, ದತ್ತು ಸ್ವೀಕಾರಆತನಲ್ಲಿ ನಿತ್ಯಜೀವವನ್ನು ಪಡೆಯಬೇಕು ಎಂದು ದೇವರು ಎಷ್ಟು ಬಯಸುತ್ತಾನೆ ಎಂಬುದನ್ನು ಈ ಎರಡು ವಚನಗಳು ನಮಗೆ ತೋರಿಸುತ್ತವೆ. ಇವೆಲ್ಲವನ್ನೂ ದೇವರು ನಮಗಾಗಿ ನಿತ್ಯತ್ವದಲ್ಲಿಯೇ ಸಂಪೂರ್ಣವಾಗಿ ಮುಗಿಸಿದ್ದಾನೆ. (2 ಥೆಸಲೋನಿಕ 2:13, 2 ತಿಮೋಥಿ 1;9) ಇದು ಆತನ ಕೃಪೆಯು ಎಷ್ಟು ಶ್ರೇಷ್ಠವಾಗಿದೆ ಎಂದು ತೋರಿಸುತ್ತದೆ. ನಮ್ಮ ರಕ್ಷಣೆಯುನಾವು ಮಾಡಿದ ಯಾವುದೇ ಕ್ರಿಯೆಗಳಿಂದ ಅಥವಾ ಅರ್ಹತೆಗಳಿಂದ ಬಂದಿದ್ದಲ್ಲ ಬದಲಾಗಿ ದೇವರ ಸಂಪೂರ್ಣವಾದ ಸ್ವಭಾವದಿಂದ ಬಂದಿದ್ದು ಎಂದು ತಿಳಿಸುತ್ತದೆ. ನಾವು ಆಯ್ಕೆಯಾಗಿದ್ದರೂ ಕೂಡ ನಮ್ಮ ಒಳ್ಳೆಯ ಕ್ರಿಯಗಳು ನಮಗೆ ರಕ್ಷಣೆಯನ್ನು ನೀಡಲು ಸಾಧ್ಯವಿಲ್ಲ ಆದರೆ ಆ ರಕ್ಷಣೆಯು ನಾವು ಹುಟ್ಟುವ ಮೊದಲೇ ದೇವರು ನಮಗಾಗಿ ನಿರ್ಣಯಿಸಿದ್ದಾನೆ ಎಂಬುದನ್ನು ತಿಳಿಯಲು ಎಷ್ಟು ಸಂತೋಷವಾಗುತ್ತದೆಯಲ್ಲವೇ?ಆದರೆ ಇದನ್ನು ಸ್ವೀಕರಿಸುವುದು ಅಥವಾ ತಿರಸ್ಕರಿಸುವುದು ನಮ್ಮ ಆಯ್ಕೆಯಾಗಿದೆ.

ಈಗ ಈ ಆಯ್ಕೆಯು ಆಯ್ಕೆಯಾದವರ ಜೀವನದಲ್ಲಿ ಸಾಕ್ಷಾತ್ಕಾರವಾಗಿದೆಯೇ? "ನಾವು ಪ್ರೀತಿಯಲ್ಲಿದ್ದು ಆತನ ಸನ್ನಿಧಿಯಲ್ಲಿ ಪರಿಶುದ್ದರೂ ನಿರ್ದೋಷಿಗಳೂ ಆಗಿರಬೇಕೆಂದು" (ಎಫೆಸ 1:4) ಇದಕ್ಕಾಗಿ ನಾವು ಆಯ್ಕೆಯಾಗಿದ್ದೇವೋ?

**ಲೋಕದ ಕೊನೆಯ ಕಾಲದಲ್ಲಿ ಕ್ರಿಸ್ತನ ಬರೋಣಕ್ಕೆ ಮುಂಚೆ ನಿತ್ಯ ಸುವಾರ್ತೆಯನ್ನು ಸಾರಲು ದೇವರು ನಮ್ಮನ್ನು ಕರೆದಿದ್ದಾನೆ. ಇತರರಿಗೆ ಇದನ್ನು ಸಾರುವ ಮೊದಲು ನಮ್ಮ ಜೀವನದಲ್ಲಿ ನಿತ್ಯ ಸುವಾರ್ತೆಯನ್ನು ನಾವು ನಮ್ಮ ಜೀವನದಲ್ಲಿ ಈ ಸುವಾರ್ತೆಯ ವಾಸ್ತವಿಕತೆಯನ್ನು ಹೇಗೆ ಅನುಭವಿಸಬೇಕು?**

**ಶುಕ್ರವಾರ**

**ಮುಂದಿನ ಆಲೋಚನೆ :** ನಾವು ರಕ್ಷಣೆಯ ಭರವಸೆಯನ್ನು ಹೊಂದಬಹುದು ಆದರೆ ಅದರ ಕುರಿತಾಗಿ ದುರಹಂಕಾರವನ್ನು ಹೊಂದಬಾರದು. ರಕ್ಷಣೆಯ ಕುರಿತಾಗಿ ಸುಳ್ಳು ಭರವಸೆ ಎನ್ನುವುದು ಇದೆಯೋ? ಹೌದು,  ಯೇಸುವು ಇದರ ಕುರಿತಾಗಿ ಎಚ್ಚರಿಸಿದ್ದಾನೆ ಕರ್ತನೇ ಕರ್ತನೇ ಎಂದು ಹೇಳುವ ಪ್ರತಿಯೊಬ್ಬನೂ ಪರಲೋಕದಲ್ಲಿ ಪ್ರವೇಶಿಸುವುದಿಲ್ಲ, ಆದರೆ ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ಮಾಡುವವನೇ ಅದರಲ್ಲಿ ಪ್ರವೇಶಿಸುವನು. ಆ ದಿನದಲ್ಲಿ ಕರ್ತನೇ ಕರ್ತನೇ ನಿನ್ನ ಹೆಸರಿನಲ್ಲಿ ನಾವು ಪ್ರವಾದಿಸಲಿಲ್ಲವೇ? ಮತ್ತು ನಿನ್ನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸಲಿಲ್ಲವೇ?ಇದಲ್ಲದೆ ನಿನ್ನ ಹೆಸರಿನಲ್ಲಿ ಬಹಳ ಮಹಾತ್ಕರ್ಯಗಳನ್ನು ಮಾಡಲಿಲ್ಲವೇ?ಎಂದು ಬಹಳ ಜನರು ನನಗೆ ಹೇಳುವರು. ಆಗ ನಾನು ಅವರಿಗೆ ನಾನು ನಿಮ್ಮನ್ನು ಎಂದಿಗೂ ಅರಿಯೆನು ದುಷ್ಟತನವನ್ನು ಮಾಡುವವರೇ ನನ್ನಿಂದ ತೊಲಗಿ ಹೋಗಿರಿ ಎಂದು ಹೇಳುವೆನು (ಮತ್ತಾಯ  7:21–23)

ಈ ಜನರು ಎರಡು ಮಹಾ ತಪ್ಪುಗಳನ್ನು ಮಾಡಿದ್ದಾರೆ. ಮೊದಲನೇಯದಾಗಿ, ದೇವರ ಹೆಸರಿನಲ್ಲಿ ಅವರು ಮಾಡಿರುವ ಶ್ರೇಷ್ಠವಾದ ಕ್ರಿಯೆಗಳ ಹೊರೆತಾಗಿಯೂ ಅವರು ದೇವರ ಚಿತ್ತವನ್ನು ನೆರವೇರಿಸುತ್ತಿಲ್ಲ, ಯೇಸುವು ಅವರನ್ನು ಕುರಿತು, ನೀವು ನನ್ನಿಂದ ದೂರ ಹೋಗಿರಿ, ನೀವು ಪಾಪವಿಲ್ಲದವರು" ಅಥವಾ ನೀವು ಪರಿಪೂರ್ಣರಲ್ಲದವರು ಎಂದು ಹೇಳಲಿಲ್ಲ, ಬದಲಿಗೆ ಆತನು ಅವರನ್ನು ಆಜ್ಞೆಯನ್ನು ಅತಿಕ್ರಮಿಸಿದವರು ಎಂಬುದಾಗಿ ಹೇಳುತ್ತಾನೆ. ಎರಡನೇಯದಾಗಿ, ಅವರ ಮೇಲೆ ಅವರು ತೋರಿಸುವ ಪ್ರಾಧಾನ್ಯತೆಯನ್ನು ಗಮನಿಸಿರಿ ಮತ್ತು ಅವರು ಏನು ಸಾಧಿಸಿದ್ದಾರೆ ಅದನ್ನು ನೋಡಿರಿ. ಇದನ್ನು ನಿನ್ನ ಹೆಸರಿನಲ್ಲಿ ಮಾಡಲಿಲ್ಲವೇ?ಮತ್ತು ಎಲ್ಲವನ್ನೂ ಕೂಡ ನಿನ್ನ ಹೆಸರಿನಲ್ಲಿಯೇ ಮಾಡಿದ್ದೇವೆ?ನಾವು ಈ ಕಾರ್ಯವನ್ನು ನಿನ್ನ ಹೆಸರಿನಲ್ಲಿ ಮಾಡಲಿಲ್ಲವೇ? ದಯವಿಟ್ಟು, ಗಮನಿಸಿರಿ, ದೇವರ ಮುಂದೆ ಮಹಿಮೆಯನ್ನು ಹೊಂದಲು

ತಮ್ಮ ಸ್ವಂತ ಕ್ರಿಯೆಗಳನ್ನು ಅವರು ಹೇಗೆ ತೋರಿಸುತ್ತಿದ್ದಾರೆ ನೋಡಿರಿ?ನಮ್ಮನ್ನು ರಕ್ಷಿಸುವ ಒಂದೇ ಒಂದು ಕ್ರಿಯೆಯೆಂದರೆ ಅದು ಕ್ರಿಸ್ತನ ಕ್ರಿಯೆಗಳು, ಅವು ನಮ್ಮ ಖಾತೆಗೆ ನಂಬಿಕೆಯ ಮೂಲಕ ವರ್ಗಾವಣೆಯಾಗಿವೆ. ಇದರಲ್ಲಿ ನಮ್ಮ ಭರವಸೆ ಅಡಗಿದೆ, ನಮ್ಮ ಕ್ರಿಯೆಗಳಲ್ಲಿ ನಮಗೆ ಭರವಸೆಯಿಲ್ಲ, ಬದಲಿಗೆ ಕ್ರಿಸ್ತನು ನಮಗಾಗಿ ಮಾಡಿದ ಕಾರ್ಯಗಳಲ್ಲಿ ನಮ್ಮ ಭರವಸೆ ಅಡಗಿದೆ.ನಿಮಗೆ ಭರವಸೆ ಬೇಕೇ? ದೇವರ ಆಜ್ಞೆಗಳಿಗೆ ವಿಧೆಯರಾಗಿರಿ ಮತ್ತು ಕ್ರಿಸ್ತನ ನೀತಿಯಲ್ಲಿ ನಿಮ್ಮ ಭರವಸೆ ಇರಲಿ ಆಗ ನಿಮಗೆ ಬೇಕಾದ ಎಲ್ಲಾ ಭರವಸೆಯು ದೊರೆಯುತ್ತದೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮಾರ್ಟಿನ್ ಲೂಥರ್ ಮತ್ತೆ ಮತ್ತೆ ಹೇಳುತ್ತಾನೆ: ನಾನು ನನ್ನನ್ನು ನೋಡಿಕೊಂಡಾಗ, ನಾನು ಹೇಗೆ ರಕ್ಷಿಸಲ್ಪಡುವೆ ಎಂದು ತಿಳಿಯುವುದಿಲ್ಲ. ನಾನು ಕ್ರಿಸ್ತನನ್ನು ನೋಡಿದಾಗ ನಾನು ಕಳೆದು ಹೋಗಲು ಹೇಗೇ ಸಾಧ್ಯ ಈ ಮಾತುಗಳಲ್ಲಿ ಯಾವ ಶ್ರೇಷ್ಠವಾದ ಜ್ಞಾನ ಅಡಗಿದೆ? ಈ ಆಲೋಚನೆಯನ್ನು ಯಾವಾಗಲೂ ಯಾಕೆ ನಮ್ಮ ಮುಂದೆ ಇಟ್ಟುಕೊಳ್ಳಬೇಕು?

2. ಲೋಕದ ಅಸ್ಥಿವಾರಕ್ಕೆ ಮುನ್ನವೇ ದೇವರು ನಿಮ್ಮನ್ನು ರಕ್ಷಣೆಗಾಗಿ ಆಯ್ಕೆ ಮಾಡಿದ್ದಾನೆ ಎಂಬುದರ ಕುರಿತಾಗಿ ಆಲೋಚಿಸಿರಿ. ಎಲ್ಲರೂ ರಕ್ಷಿಸಲ್ಪಡುವುದಿಲ್ಲ ಎಂಬುದನ್ನು ಇದು ಹೇಗೆ ದೃಢಪಡಿಸುತ್ತದೆ? ಒಂದು ವೇಳೆ ಜನರು ರಕ್ಷಣೆ ಹೊಂದದೆ ಹೋದರೆ ದೇವರು ಅವರನ್ನು ಆಯ್ಕೆ ಮಾಡಿಲ್ಲ ಎಂದು ಹೇಳಬೇಕೊ ಅಥವಾ ಅವರು ಆಯ್ಕೆ ಮಾಡಿಕೊಂಡಿಲ್ಲ ಎಂದು ಹೇಳಬೇಕೋ?ಈ ಪ್ರಶ್ನೆಯನ್ನು ತರಗತಿಯಲ್ಲಿ ಚರ್ಚಿಸಿರಿ?

3. ಪ್ರೀತಿ ಸ್ವರೂಪನಾದ ತಂದೆ, ಮಗ ಮತ್ತು ಪರಿಶುದ್ಧಾತ್ಮನ ಹೊರತಾಗಿಯೂ ಕೂಡ ಲೋಕದಲ್ಲಿ ಮಹಾ ಹೋರಾಟದ ಮತ್ತು ದುಷ್ಟತನದ ವಾಸ್ತವಿಕತೆಯನ್ನು ಹೇಗೆ ನಾವು ಅರ್ಥ ಮಾಡಿಕೊಳ್ಳಬೇಕು?